# Research maGma

## (An International Multidisciplinary Journal)

**UGC Approved Journal No: 63465**

Editor in Chief
Dr. Sanjay Kumar Singh

Associate Editor
Dr. T. Manichander

# Research maGma

Research maGma is a multidisciplinary research journal, published monthly in all Language. All research papers submitted to the journal will be double - blind peer reviewed .


## Our Editorial Board

Dr Anil Kumar S.
Dr. Gatade Dattatraya Ganapati
Dr. Prashant Thote
Dr. Deepa Viswam
Dr. Anamika Kumari
Smt. B.S.Gunarekha
Dr. P. Samuel
Dr. Pargat Singh Garcha
Dr. M. Abdul Jamal
Dr. Tapas Pal
Dr. Gardi Balu Pandurang
Dr. Dnyaneshwar Babulal Shirode
Dr. Ashokkumar B. Surapur
Dr. N. Sasikumar
Dr. Saykar Satish Govind
Dr. A. Paul Albert
Dr. Atul Hansraj Salunke
Mr. Sanjeev Kumar Mishra
Dr. Neeta Sukhendrapal Singh
Dr. Kispotta Seraphinus
Dr. Santosh Kumar Behera
Dr. Sandhya Ayaskar
Dr. S. Aravind
Dr. Sandeep V. Binorkar
Dr. Raval Sandeep Krishnat
Dr. Mahesh Nawria
Dr. Tamanna Kaushal
Dr. Deepak B. Nale
Dr. Ram Chander
Dr. Sudhir Kumar Jena
Dr. S Maxwell Lyngdoh
Dr. Bhed Pal Gangwar
Dr. Shaikh Fahemeeda
Dr. Deshai Rajesh Bhaurao

Research maGma
An International Multidisciplinary Journal

ISSN- 2456-7078 IMPACT FACTOR- 4.520

VOL-1, ISSUE-10, DEC-2017

# ಜನಪದ ವೈದ್ಯ ಪದ್ಧತಿ

[೧]ರವಿ ಪ್ರಕಾಶ್, [೨]ಡಾ. ಜಗದೀಶ್‌ಬಾಬು ಬಿ. ವಿ.

[೧]ಸಂಶೋಧನಾ ವಿದ್ಯಾರ್ಥಿ, ರುಕ್ಮಿಣಿ ನಾಲೆಡ್ಜ್ ಪಾರ್ಕ್, ಕಟ್ಟಿಗೇನಹಳ್ಳಿ, ಯಲಹಂಕ, ಬೆಂಗಳೂರು–೫೬೦೦೬೪.

[೨]ಮಾರ್ಗದರ್ಶಕರು, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ, ರೇವ ನಿರ್ವಹಣಾ ಪದವಿ ಕಾಲೇಜು, ಗಂಗಾನಗರ, ಬೆಂಗಳೂರು–೨೪.

ನಮ್ಮ ಪರಿಸರದಲ್ಲಿ ದೊರೆಯುವ ಗಿಡ, ಮರ, ಬೇರು, ಬಳ್ಳಿ ಮತ್ತು ಅಡುಗೆ ಮನೆಯ ಪದಾರ್ಥಗಳಾದ ಶುಂಠಿ, ಜೀರಿಗೆ, ಮೆಣಸು, ಈರುಳ್ಳಿ, ಅರಿಶಿಣ, ಬೆಳ್ಳುಳ್ಳಿ, ಲವಂಗ ಮೊದಲಾದವುಗಳನ್ನು ಬಳಸಿಕೊಂಡು, ಸ್ವಂತ ಅನುಭವದ ಆಧಾರದ ಮೇಲೆ ತಯಾರಿಸುವ ಮದ್ದೇ ಜನಪದ ವೈದ್ಯ ಅಥವಾ ಮನೆಮದ್ದು. ಇಂದಿಗೂ ಸಕಲೇಶಪುರದ ಜನಪದರು ತಮಗೆ ಅಥವಾ ತಮ್ಮ ಒಡನಾಡಿಗಳಾದ ಸಾಕುಪ್ರಾಣಿಗಳಿಗೇನಾದರೂ ರೋಗಗಳು ಸಂಭವಿಸಿದಾಗ ಪ್ರಕೃತಿಯಲ್ಲಿ ದೊರೆಯುವ ಗಿಡಮೂಲಿಕೆಗಳನ್ನು ಬಳಸಿಕೊಂಡು ಕಷಾಯ ತಯಾರಿಸಿ ರೋಗ ನಿವಾರಿಸಿಕೊಳ್ಳುತ್ತಾರೆ. ತಮಗೆ ಬರುವ ರೋಗಗಳಿಗೆಲ್ಲ ಒಂದೊಂದು ರೀತಿಯ ಮದ್ದು ತಯಾರಿಸಿಕೊಳ್ಳುವುದರಿಂದ ಸಣ್ಣಪುಟ್ಟ ರೋಗಕ್ಕೆಲ್ಲ ಇವರು ದವಾಖಾನೆಗೆ ಹೋಗುವುದಿಲ್ಲ. ಹಾಗೆಯೇ ಜನಪದ ವೈದ್ಯರ ಪಶುವೈದ್ಯ ಪದ್ಧತಿಯ ಬಗ್ಗೆಗಿನ ಜ್ಞಾನವನ್ನು ನಾವು ಇಲ್ಲಿ ತಿಳಿಯಬಹುದು.

ಇಲ್ಲಿನ ಮನುಷ್ಯರು ತಮ್ಮ ಕಾಯಿಲೆಗಳಿಗೂ ಕೂಡ ಔಷಧಿಯನ್ನು ಕಂಡುಕೊಂಡಿರುವುದಾಗಿ ತಿಳಿಯಬಹುದು.

ಕಣ್ಣು ಕುಟುಕ: ಮನುಷ್ಯನ ಕಣ್ಣಿನಲ್ಲಿ ಕಣ್ಣು ಕುಟುಕ ಕಾಣಿಸಿಕೊಳ್ಳುತ್ತದೆ. ಆ ಸಮಯದಲ್ಲಿ ಖರ್ಜೂರದ ಬೀಜವನ್ನು ತೇವೆದು, ಸ್ವಲ್ಪ ನೀರಿನೊಂದಿಗೆ ಬೆರೆಸಿ ಗಾಯದ ಜಾಗಕ್ಕೆ ಹಚ್ಚುವುದರಿಂದ ಕಣ್ಣು ಕುಟುಕ ಮಾಯವಾಗುತ್ತದೆ.

ಕಾಲಿಗೆ ಕೂಳೆ ಚುಚ್ಚಿದರೆ: ಅರಿಶಿನ ಮತ್ತು ಬಿಸಿ ಅನ್ನವನ್ನು ಉಪ್ಪಿನ ಜೊತೆ ಸೇರಿಸಿ ತೇಯಬೇಕು. ನಂತರ ಕೂಳೆ ಚುಚ್ಚಿದ ಜಾಗಕ್ಕೆ ಬಿಸಿಮಾಡಿಕೊಂಡು ಶಾಖಕೊಡುತ್ತಾ ಹೋದಂತೆ ಗಾಯ ಗುಣವಾಗುವುದು.

ಕಾಲಿಗೆ ಮುಳ್ಳು ಚುಚ್ಚಿದಾಗ: ಕಾಲಿಗೆ ಮುಳ್ಳು ಚುಚ್ಚಿದ ಜಾಗಕ್ಕೆ ಹೆಕ್ಕದ ಗಿಡದ ಹಾಲನ್ನು ಹಾಕುವುದರಿಂದ ಮುಳ್ಳು ಹೊರಬರುತ್ತದೆ.

ಹೊಟ್ಟೆ ಉಬ್ಬರಿಸಿದ್ದರೆ: ಮನುಷ್ಯನಿಗೆ ಹೊಟ್ಟೆ ಉಬ್ಬರಿಸಿದ್ದರೆ ಬಿಳಿಯ ಬಟ್ಟೆಯ ಚೂರು, ಅರಿಶಿಣದ ನೀರನ್ನು ಸೇರಿಸಿ ಆ ವ್ಯಕ್ತಿಗೆ ನೀವಾಳಿಸಿದರೆ ಹೊಟ್ಟೆ ಉಬ್ಬರಿಸಿರುವುದು ಕಡಿಮೆಯಾಗುತ್ತದೆ.

ಕಾಲಿಗೆ ಹಾಣೆಯಾದಾಗ: ಹಾಣೆಯಾದ ಜಾಗದ ಮೇಲೆ ಬೆಲ್ಲವನ್ನು ಬಿಸಿ ಮಾಡಿ ದಿನಕ್ಕೆ ಮೂರು ಸಲ ಇಡಬೇಕು. ಹೀಗೆ ಮಾಡಿದರೆ ಕಾಲಿಗಾದ ಹಾಣೆ ವಾಸಿಯಾಗುತ್ತದೆ.

**ಸೋಂಕು:** ಸೋಂಕು ತಗಲಿದಾಗ ಮೂರು ತರದ ಹೂ, ಪರಕೆ ಕಡ್ಡಿ(೩), ಮೂರು ಒಣಗಿದ ಮೆಣಸಿನ ಕಾಯಿ ಮತ್ತು ಅರಿಶಿಣ ಪುಡಿಯನ್ನು ನೀರಿನಲ್ಲಿ ಸೇರಿಸಿ,  ಮೂರುಕಣ್ಣಿನ ಚಿಪ್ಪನ್ನು ಸುಟ್ಟು, ಸೋಂಕು ತಗಲಿದ ವ್ಯಕ್ತಿಗೆ ನಿವಾಳಿಸಿ, ಅರಿಶಿಣದ ನೀರಿಗೆ ಹಾಕಬೇಕು. ಇದನ್ನು ಒಂಭತ್ತು ಸಲ ನಿವಾಳಿಸಿ, ಅದಕ್ಕೆ ಉಗಿದು, ಕೂದಲು, ಊಗುರು ಸೇರಿಸಿ ಮೂರು ದಾರಿ ಕೂಡುವ ಜಾಗಕ್ಕೆ ಹಾಕುವುದರಿಂದ ಸೊಂಕು ವಾಸಿಯಾಗುತ್ತದೆ.

**ಮಕ್ಕಳು ಅಳುತ್ತಿದ್ದಾಗ:** ಮಕ್ಕಳು ತುಂಬಾ ಅಳುತ್ತಿದ್ದಾಗ ವೀಳೆದೆಲೆ ತೆಗೆದುಕೊಂಡು ಅದಕ್ಕೆ ಒಂಭತ್ತು ತೂತು ಮಾಡಿ ಎಣ್ಣೆ ಹಚ್ಚಿ, ಅದನ್ನು ಮಕ್ಕಳಿಗೆ ನಿವಾಳಿಸಿ ಬೆಂಕಿಯಲ್ಲಿ ಹಾಕುವುದರಿಂದ ಅಳುವುದನ್ನು ನಿಲ್ಲಿಸುತ್ತಾರೆ.

**ಸುಟ್ಟಗಾಯ:** ಬೆಂಕಿಯಲ್ಲಿ ಸುಟ್ಟುಕೊಂಡಿದ್ದರೆ ಹುಣಸೆ ಮರದ ಚೆಕ್ಕೆ ತೆಗೆದು, ಪುಡಿ ಮಾಡಿ, ಕೊಬ್ಬರಿ ಎಣ್ಣೆಯೊಂದಿಗೆ ಸೇರಿಸಿ ಬಿಸಿ ಮಾಡಿ ಸುಟ್ಟಿರುವ ಜಾಗದಲ್ಲಿ ಹಚ್ಚುತ್ತಾ ಹೋದಂತೆ ಗಾಯ ಮಾಯವಾಗುವುದು. ಅಥಾವ ಸುಟ್ಟ ಗಾಯಕ್ಕೆ ದಿನಕ್ಕೆ ನಾಲ್ಕೈದು ಬಾರಿ ಲೋಳೆರಸವನ್ನು ಹಚ್ಚುವುದರಿಂದಲೂ ಸಹ ಗಾಯ ವಾಸಿಯಾಗುವುದು.

**ಗರ್ಭಿಣಿಯರಿಗೆ ಹೊಟ್ಟೆ ನೋವು ಬಂದರೆ:** ಗರ್ಭಿಣಿಯರಿಗೆ ಹೊಟ್ಟೆನೋವು ಬಂದಾಗ ಹರಳೆಗಿಡದ ಬೇರನ್ನು ತೊಳೆದು ಪುಡಿಮಾಡಿ ಜೀರಿಗೆಯನ್ನು ಸೇರಿಸಿ ನೀರಿನಲ್ಲಿ ಕುದಿಸಿ, ಅದನ್ನು ಗರ್ಭಿಣಿಯರು ಕುಡಿದರೆ ಹೊಟ್ಟೆನೋವು ಕಡಿಮೆಯಾಗುವುದು.

**ಸಕ್ಕರೆ ಕಾಯಿಲೆ:** ನಿತ್ಯಪುಷ್ಪ ಗಿಡದ ಎಲೆಯನ್ನು ಸಕ್ಕರೆ ಕಾಯಿಲೆ ಇರುವವರು ಪ್ರತಿನಿತ್ಯ ಖಾಲಿ ಹೊಟ್ಟೆಯಲ್ಲಿ ತಿಂದರೆ ಸಕ್ಕರೆ ಕಾಯಿಲೆ ವಾಸಿಯಾಗುತ್ತದೆ.

**ಮೂಲವ್ಯಾಧಿ:** ಮೂಲವ್ಯಾಧಿ ಇರುವವರು ಪ್ರತಿದಿನ ಖಾಲಿ ಹೊಟ್ಟೆಯಲ್ಲಿ ಬಿಳಿದಾಸವಾಳದ ಎಲೆಯನ್ನು ತಿನ್ನುತ್ತಾ ಬಂದಂತೆ ಮೂಲವ್ಯಾಧಿ ಗುಣಮುಖವಾಗುವುದು.

**ಹೊಟ್ಟೆಯಲ್ಲಿ ಕೂದಲು ಇದ್ದರೆ:** ಎಳೆಯ ಬಾಳೆದಿಂಡನ್ನು ಸಣ್ಣ ಸಣ್ಣದಾಗಿ ಕತ್ತರಿಸಿ, ಪಲ್ಯ ಮಾಡಿ ತಿನ್ನುವುದರಿಂದ ಹೊಟ್ಟೆಯಲ್ಲಿ ಕೂದಲು ಇರುವುದಿಲ್ಲ.

**ಕೆಮ್ಮು:** ಜೀರಿಗೆ, ಶುಂಠಿ ಮತ್ತು ಮೆಣಸಿನ ಕಷಾಯವನ್ನು ಕುಡಿಯುವುದರಿಂದಲೂ ಕೆಮ್ಮು ಕಡಿಮೆಯಾಗುವುದು.

**ಅರ್ಧಲೆ ನೋವು:** ಮೂಗಿನ ಹೊಳ್ಳೆಗಳಿಗೆ ತುಪ್ಪ ಹಾಕಬೇಕು ಅಥವಾ ಸಣ್ಣ ಈರುಳ್ಳಿಯನ್ನು ಜಜ್ಜಿ ಅದರ ರಸವನ್ನು ಮೂಗಿನ ಹೊಳ್ಳೆಗೆ ಹಾಕುವುದರಿಂದ' ಅರ್ಧಲೆನೋವು ಕಡಿಮೆಯಾಗುವುದು.

**ಹುಳುಕಡ್ಡಿ:** ಚರ್ಮರೋಗವಾದ ಹುಳುಕಡ್ಡಿಗೆ ಬೆಳ್ಳುಳ್ಳಿ ರಸ, ತುಳಸಿ ರಸ, ಗರಕೆಹುಲ್ಲಿನ ರಸ ಮತ್ತು ನಜೆಹುಲ್ಲಿನ ರಸವನ್ನು ಸಹ ಲೇಪಿಸುವುದರಿಂದ ಹುಳುಕಡ್ಡಿ ಮಾಯವಾಗುವುದು.

**ನಾಯಿಕಡಿತ:** ನಾಯಿ ಕಚ್ಚಿದ ಜಾಗಕ್ಕೆ ತಾಮ್ರದ ನಾಣ್ಯ ಅಂಟಿಸಬೇಕು ಅಥವಾ ಎಳ್ಳು, ಬೆಲ್ಲ ಮತ್ತು ಕೊಬ್ಬರಿಯನ್ನು ರುಬ್ಬಿ ಕುಡಿಸುವುದರಿಂದ ನಂಜು ಹರಡದಂತೆ ತಡೆಗಟ್ಟಬಹುದು.

**ರಕ್ತಭೇದಿ :** ಒಂದೆ ಸಮನೆ ರಕ್ತ ಭೇದಿಯಾಗುತ್ತಿದ್ದರೆ ನಿಂಬೆಹಣ್ಣಿನ ರಸಕ್ಕೆ ಸೋಡಾ ಪುಡಿ ಸೇರಿಸಿ ಕುಡಿಸಬೇಕು ಅಥವಾ ಉಪ್ಪು ನಿಂಬೆ ರಸವನ್ನು ಸೇವಿಸುವುದರಿಂದಲೂ ರಕ್ತ ಭೇದಿ ಶಮನವಾಗುತ್ತದೆ. ನೇರಳೆ ಮರದ ತೊಗಟೆಯ ರಸ ಕುಡಿಯುವುದರಿಂದಲೂ ಭೇದಿ ಗುಣವಾಗುವುದು.

**ಕಾಮಾಲೆ ರೋಗ:** ಕಬ್ಬು ಹಾಗೂ ಕಬ್ಬಿನ ಹಾಲನ್ನು ಯಥೇಚ್ಛವಾಗಿ ಸೇವಿಸುವುದರಿಂದ ಕಾಮಾಲೆ ರೋಗ ಗುಣವಾಗುವುದು.

ಭಟ್ಟಿ: ಸಾಮಾನ್ಯವಾಗಿ ಹೆಂಗಸರಲ್ಲಿ ಭಟ್ಟಿ ಜಾರಿದಾಗ ಕೆಳಹೊಟ್ಟೆಯ ಬಳಿ ತಾಳಲಾರದ ನೋವು ಉಂಟಾಗುತ್ತದೆ. ಈ ಸಂಬಂಧವಾಗಿ ನಾಲ್ಕು ಬಗೆಯ ಚಿಕಿತ್ಸೆ ಮಾಡುವುದಾಗಿ ನಾಟಿ ವೈದ್ಯದಲ್ಲಿ ಪ್ರವೀಣರಾದ ಶ್ರೀಮತಿ ಇನಾಸಮ್ಮ, ಶ್ರೀಮತಿ ಮೋನಿಕಮ್ಮ, ಶ್ರೀಯುತ ಮಂಜಯ್ಯ, ಹಾಗೂ ಶ್ರೀಯುತ ದೇವಯ್ಯರವರು ತಿಳಿಸಿದರು.

❈ ಹೊಕ್ಕಳಿಗೆ ಕಲ್ಲು ಇಟ್ಟುಕೊಂಡು ಅಂಗಾತ ಮಲಗುವುದು.

❈ ಅಂಗಾತ ಮಲಗಿಸಿ ಕೆಳ ಹೊಟ್ಟೆ ಭಾಗದ ಮಾಂಸವನ್ನೆಲ್ಲಾ ಒಟ್ಟಿಗೆ ಹಿಡಿದು ಅದನ್ನು ಒಂದು ಲೋಟ ಅಥವಾ ಚೊಂಬಿನೊಳಕ್ಕೆ ಸೇರಿಸಿದಾಗ ಅದು ಗಟ್ಟಿಯಾಗಿ ಹಿಡಿದುಕೊಂಡರೆ ಭಟ್ಟಿ ಜಾರಿದೆ ಎಂಬುದು ಸ್ಪಷ್ಟವಾಗುತ್ತದೆ. ಹಿಡಿದ ಲೋಟ ಬಿಟ್ಟಾಗ ಭಟ್ಟಿ ಸರಿಯಾಗುವುದು.

ಉಗುರು ಸುತ್ತು: ಉಗುರು ಸುತ್ತಿಗೆ ಕೋಣದ ಮೂಗಿನೊಳಗೆ ಬೆರಳು ಹಾಕುವುದು ಮತ್ತು ಲೋಳೆರಸವನ್ನು ಮತ್ತು ಕೌಟ್ಟೆ ಕಾಯಿಯನ್ನು ಕಟ್ಟಿಕೊಳ್ಳುವುದರಿಂದ ಗಾಯ ಮಾಯವಾಗುವುದು.

ಜನಪದರು ತಮ್ಮ ಕಾಯಿಲೆಗಳಿಗೆ ಮಾತ್ರವಲ್ಲದೆ ಜಾನುವಾರುಗಳಿಗೂ ಕೂಡ ನಾಟಿ ಔಷಧಿಯನ್ನು ಕಂಡುಕೊಂಡಿರುವುದಾಗಿ ತಿಳಿಯಬಹುದು.

ಜ್ವರ: ಜಾನುವಾರುಗಳಿಗೆ ಜ್ವರ ಬಂದರೆ ಬೆಲ್ಲ, ಈರುಳ್ಳಿ, ಕೊತ್ತಂಬರಿ ಬೀಜಗಳೆಲ್ಲವನ್ನೂ ಒಟ್ಟಿಗೆ ಪುಡಿಮಾಡಿ ದಿನಕ್ಕೆ ಮೂರು ಬಾರಿ ತಿನ್ನಿಸಿ, ರಾಗಿ ಅಂಬಲಿ ಕುಡಿಸುವುದರಿಂದ ಎರಡೇ ದಿನಕ್ಕೆ ಜಾನುವಾರುಗಳಿಗೆ ಜ್ವರ ಮಾಯವಾಗುತ್ತದೆ.

ಕೆಚ್ಚಲ ಬಾವು: ಈ ಕಾಯಿಲೆ ಹಸುಗಳ ಕೆಚ್ಚಲಲ್ಲಿ ಕಾಣಿಸಿಕೊಳ್ಳುತ್ತದೆ. ಆ ಸಂದರ್ಭದಲ್ಲಿ ಹಸುವಿನ ಕೆಚ್ಚಲಿಗೆ ಕೆಮ್ಮಣ್ಣನು ಒಂದು ವಾರಗಳ ಕಾಲ ಹಚ್ಚುವುದರಿಂದ ಕೆಚ್ಚಲ ಬಾವು ಮಾಯವಾಗುವುದು. ಅಥವಾ ಜೇನುತುಪ್ಪವನ್ನು ಹದಿನೈದು ದಿನಗಳ ಕಾಲ ಕೆಚ್ಚಲಿಗೆ ಹಚ್ಚುತ್ತಾ ಬಂದಂತೆ ಕೆಚ್ಚಲ ಬಾವು ಇಲ್ಲದಂತೆ ಮಾಯವಾಗುತ್ತದೆ.

ಕಾಲುಬೇನೆ: ದನದ ಕಾಲಿನ ಗೊರಸಿಗೆ ಹುಳುಬಿದ್ದು ಗಾಯವಾದಾಗ ನುಸಿಗುಳಿಗೆ ಮತ್ತು ಕೊಬ್ಬರಿ ಎಣ್ಣೆಯನ್ನು ಬಿಸಿಮಾಡಿ ಕೋಳಿಗರಿಯಿಂದ ಗಾಯವಾದ ಭಾಗಕ್ಕೆ ಲೇಪಿಸುವುದರಿಂದ ಹುಳುಗಳು ನಾಶವಾಗಿ ಗಾಯ ವಾಸಿಯಾಗುತ್ತದೆ. ಈ ಗಾಯಕ್ಕೆ ಮೀನೆಣ್ಣೆಯನ್ನು ಕೂಡ ಲೇಪಿಸುವುದರಿಂದ ರೋಗ ವಾಸಿಯಾಗುತ್ತದೆ.

ಹೆಗಲು ಬಂದರೆ: ಭೂಮಿಯಲ್ಲಿ ತೇವಾಂಶವಿಲ್ಲದಾಗ ಉಳುಮೆ ಮಾಡಿದರೆ ಅಥವಾ ಬಿಡುವು ಕೊಡದೆ ಒಂದೇ ಸಮನೆ ಬೇಸಾಯ ಮಾಡಿದಾಗ ಎತ್ತಿನ ಹೆಗಲು ಊದಿಕೊಂಡು ಕಲ್ಲಿನಂತೆ ಗಟ್ಟಿಯಾಗುವ ಸಂಭವ ಇದ್ದು ಇದಕ್ಕೆ 'ಹೆಗಲು ಬರುವುದು' ಎನ್ನುತ್ತಾರೆ. ಇದಕ್ಕೆ ಗರಗಲು ಸೊಪ್ಪನ್ನು ಅರೆದು ಊದಿದ ಭಾಗಕ್ಕೆ ಕಟ್ಟಿ, ಬಿಸಿ ನೀರು ಹಾಕಿ ಹೆಗಲನ್ನು ಚೆನ್ನಾಗಿ ತಿಕ್ಕುವುದರಿಂದ ಗಂಟು ಕರಗಿ ನೋವು ನಿವಾರಣೆಯಾಗತ್ತದೆ.

ಮೂಗ್ಹುಣ್ಣು: ಜಾನುವಾರಗಳು ಮೂಗಿನಲ್ಲಿ ಸಿಂಬಳ ಸುರಿಸುತ್ತ ಉಸಿರಾಡುವಾಗ 'ಗುರ್ ಗುರ್' ಎಂಬ ಶಬ್ಧ ಮಾಡುತ್ತಿದ್ದರೆ ಮೂಗಿನಲ್ಲಿ ಹುಣ್ಣಾಗಿದೆ ಎಂದು ಭಾವಿಸಿ 'ದಯ್ಯಮಟ್ಟೆ'ಯನ್ನು ಮೂಗಿನೊಳಗೆ ಹಾಕಿ ತಿಕ್ಕಬೇಕು ಮತ್ತು ಮೂಗಿನೊಳಕ್ಕೆ ಸಾರಾಯಿಯನ್ನು ಸುರಿಯುವುದರಿಂದಲೂ ಹುಣ್ಣು ವಾಸಿಯಾಗುವುದು.

ಶೀತ: ಜಾನುವಾರುಗಳಿಗೆ ಶೀತವಾದಾಗ 'ಎಕ್ಕದ' ಗಿಡದ ಕಡ್ಡಿಯನ್ನು ಮೂಗಿನ ಎರಡೂ ಹೊಳ್ಳೆಗಳಿಗೆ ಹಾಕಿ ತಿರುಗಿಸುವುದರಿಂದ ಸೀನುಬಂದು ಶೀತ ಕಡಿಮೆಯಾಗುತ್ತದೆ.

ರಕ್ತ ಭೇದಿ: ದನಗಳಿಗೆ ರಕ್ತ ಭೇದಿಯಾಗುತ್ತಿದ್ದರೆ ಬಿಳಿ ಈರುಳ್ಳಿ, ಕಲ್ಲು ಸಕ್ಕರೆ, ಕಾಡು ಈರುಳ್ಳಿ, ಪೆಟ್ಟಿಗೆ ಸೊಪ್ಪನ್ನು ಚೆನ್ನಾಗಿ ಚಚ್ಚಿ ಅದರ ರಸವನ್ನು ಹುಳಿ ಮಜ್ಜಿಗೆಯೊಂದಿಗೆ ದಿನಕ್ಕೆ ಮೂರು ಬಾರಿ ಗೊಟ್ಟದಲ್ಲಿ ಕುಡಿಸುವುದರಿಂದ ಈ ರೋಗ ವಾಸಿಯಾಗಿತ್ತದೆ. ಕಾಲು ಮುರಿದರೆ: ಕಾಲು ಮುರಿದ ಭಾಗಕ್ಕೆ ಬಿದಿರು ದಬ್ಬೆ ಸೇರಿಸಿ ಗಟ್ಟಿಯಾಗಿ ಕಟ್ಟಬೇಕು. ಬಿಸಿಮಾಡಿದ ಕೆಮ್ಮಣ್ಣಿನ ನೀರು ಸುರಿಯಬೇಕು ಮತ್ತು ಗರಗಸಸೊಪ್ಪಿನ ರಸವನ್ನು ಹಾಕುವುದರಿಂದ ಕಾಲು ಸರಿಯಾಗುವುದು.

ನೀರು ಸುರಿಯುತ್ತಿದ್ದರೆ: ಹುಲಿ ಕಡ್ಡಿಯ ಮೂಲಕ ಕಣ್ಣಿಗೆ ಉಸಿರು ಬಿಡುವುದರಿಂದಲೂ ಕಣ್ಣಿಗೆ ಕೂತಿದ್ದ ಹೂವು ಮಾಯವಾಗುತ್ತದೆ. ಕಣ್ಣಿಗೆ ಕಳ್ಳಿ ಹಾಲು ಬಿದ್ದಾಗ ಬಿಳಿನಾಮವನ್ನು ಹಾಕುವುದರಿಂದ ಕಣ್ಣಿನಿಂದ ನೀರು ಸುರಿಯುವುದಿಲ್ಲ.

ಇವರು ಅನುಸರಿಸುವ ವೈದ್ಯದಲ್ಲಿ ಮೇಲುನೋಟಕ್ಕೆ ಯಾವುದೇ ವೈಜ್ಞಾನಿಕ ಅಂಶ ಇಲ್ಲವಾದರೂ ಅವುಗಳ ಬಗೆಗೆ ಜನರಿಗಿರುವ ಬಲವಾದ ನಂಬಿಕೆಯಿಂದಲೇ ಜನಪದರ ಮತ್ತು ಕಾಲ್ನಡೆಗಳ  ಕಾಯಿಲೆಗಳು ವಾಸಿಯಾಗುತ್ತವೆ. ಎಲ್ಲದಕ್ಕೂ ನಂಬಿಕೆ ಮತ್ತು ಮನಸ್ಸೇ ಮುಖ್ಯ ಕಾರಣ. ಅಂದರೆ ಮನಸ್ಸು ಹೇಳದಂತೆ ದೇಹ ಕೇಳುತ್ತದೆ. ಹಾಗಾಗಿ ಇವೆಲ್ಲವೂ ಇಂದಿಗೂ ಸಕಲೇಶಪುರದ ಜನರಲ್ಲಿ ನಂಬಿಕೆಯ  ಜೊತೆ ಜೊತೆಯಾಗಿಯೇ ಉಳಿದುಕೊಂಡು ಬರುತ್ತಿವೆ. ಹೀಗೆ ಇಲ್ಲಿನ ಜನರು ತಮ್ಮದೇ ಆದ ಅನೇಕ ರೀತಿಯ ಮನೆ ಮದ್ದನ್ನು ಕಂಡುಕೊಂಡು ಅವುಗಳ ಮೂಲಕ ತಮಗೆ ಮತ್ತು ತಮ್ಮ ಕಾಲ್ನಡೆಗಳಿಗೆ ಅಂಟಿಕೊಳ್ಳುವ ಜಾಡ್ಯಗಳಿಂದ ವರ್ತಮಾನದ ಇವತ್ತಿಗೂ ಮುಕ್ತಿ ಕಂಡುಕೊಳ್ಳುತ್ತಿರುವುದು ವಾಸ್ತವವಾಗಿದೆ.

ಆಧುನಿಕರಣ, ನಗರಿಕರಣ, ಕೈಗಾರಿಕರಣ, ಜಾಗತಿಕರಣಗಳ ಭರಾಟೆಯಲ್ಲಿ ಜೀವನ ನಿರ್ವಹಣೆಗೆ ಒಂದು ಸಾಧನವಾದ ಹಣ ಮನುಷ್ಯನನ್ನೇ ಆಳುತ್ತಿರುವ ವರ್ತಮಾನದ ಪರಿಸ್ಥಿತಿಯಲ್ಲಿ ಸಕಲೇಶಪುರದ ಜನಪದರು ನಾಟಿವೈದ್ಯ ಪದ್ಧತಿ ಅಥವಾ ಮನೆಮದ್ದುಗಳಿಂದ ಹಲವು ಜಾಡ್ಯಗಳಿಗೆ ಮದ್ದುಗಳನ್ನು ರೂಢಿಮಾಡಿಕೊಂಡಿರುವುದು ಎಷ್ಟೊಂದು ಔಚಿತ್ಯವಲ್ಲವೆ? ಇವೆಲ್ಲ ಮಾಹಿತಿಗಳನ್ನು ಸಂಶೋಧಕನಾದ ನಾನು ಕ್ಷೇತ್ರ ಕಾರ್ಯದ ಮೂಲಕ ಸಕಲೇಶಪುರದಾದ್ಯಂತ ಓಡಾಡಿ ಹಿರಿಯ ಸಂಪನ್ಮೂಲ ವ್ಯಕ್ತಿಗಳನ್ನು ಜನಪದ ವೈದ್ಯರನ್ನು ಭೇಟಿ ಮಾಡಿ ಈ ಜನಪದ ವೈದ್ಯ ಪದ್ಧತಿಯ ಬಗ್ಗೆ ನನ್ನ ಸಂಶೋಧನಾ ವಿಷಯಕ್ಕೆ ಮಾಹಿತಿಯನ್ನು ಸಂಗ್ರಹಿಸಿರುತ್ತೇನೆ.

## ಪರಾಮರ್ಶನ ಗ್ರಂಥಸೂಚಿ :

೧.ಡಾ. ಮಾಗಡಿ ಆರ್ ಗುರುದೇವ:

ಕರ್ನಾಟಕದ ಔಷಧೀಯ ಸಸ್ಯಗಳು, ದಿವ್ಯಚಂದ್ರ ಪ್ರಕಾಶನ. ಬೆಂಗಳೂರು ೧೯೯೮.

೨.ಡಾ. ಎಂ.ವಸುಂಧರ:

ಸೌಂದರ್ಯ ವರ್ಧಕ ಗಿಡಮೂಲಿಕೆಗಳು, ಕಾವ್ಯಕಲಾ ಪ್ರಕಾಶನ, ಬೆಂಗಳೂರು. ೨೦೧೦

೩.ಕಲ್ಪನಾ ಅರುಣ್:

ಗೃಹ ಸಂಜೀವಿನಿ, ನವಭಾರತ ಪ್ರಕಾಶನ, ಬೆಂಗಳೂರು. ೨೦೦೭

೪.ಎಸ್.ದತ್ತಾತ್ರೇಯ ಶರ್ಮ:

ಮನೆ ಔಷಧಿ, ವಿದ್ಯಾರ್ಥಿ ಪ್ರಕಾಶನ, ಬೆಂಗಳೂರು. ೨೦೦೯

೫.ಮುನಿಯಾಲ್ ಗಣೇಶ್ ಶೆಣೈ:

ಒಣದೆಲಗ, ನಾಲಂದಾ ಸಾಹಿತ್ಯ, ಕುಂದಾಪುರ. ೨೦೦೯ಸಸ